# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/211/14-15 ದಿನಾಂಕ : 26/07/2016

ಉಪಸ್ಥಿತರು: ಶ್ರೀ ಲೊಕೇಶ ಪಿ. ಎನ್. ಕ.ಆ.ಸೇ

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಕೆ. ತಿಪ್ಪಣ್ಣ ತಂದೆ ವೆಂಕಟಪ್ಪ,<br>ತಿಮ್ಮಲಾಪುರ ಗ್ರಾಮ, ಸಂಡೂರು ತಾಲ್ಲೂಕು<br>(ಶ್ರೀ ಬಿ. ಎಂ. ಸುರೇಶ್, ವಕೀಲರು, ಬಳ್ಳಾರಿ) | ಶ್ರೀಮತಿ ಸರೋಜಮ್ಮ<br>ಗಂಡ ತಿಮ್ಮಯ್ಯ,<br>ತಿಮ್ಮಲಾಪುರ ಗ್ರಾಮ, ಸಂಡೂರು ತಾಲ್ಲೂಕು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ |
|---|---|---|---|
| ಸಂಡೂರು | ತಿಮ್ಮಲಾಪುರ | 49 ಪೈಕಿ | 4.00 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ತೋರಣಗಲ್ಲು ಇವರ ಎಂ ಆರ್ ನಂ 02/2000-01 ದಿನಾಂಕ 24/05/2001 ಆದೇಶದ ವಿರುದ್ಧ ಮೇಲ್ಮನವಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿ ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿದ್ದಾರೆ. ವಿಳಂಬ ಮನ್ನಾ ಮಾಡಿ ಪ್ರಕರಣ ದಾಖಲಿಸಿ ಕೊಳ್ಳಲಾಯಿತು ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಪ್ರಕರಣವನ್ನು ದಾಖಲಿಸಿಕೊಂಡು ಉಭಯ ಪಕ್ಷಗಾರರಿಗೂ ನೋಟೀಸನ್ನು ನೀಡಿ ದಿನಾಂಕ 16/06/2015, 28/07/2015, 01/09/2015, 06/10/2015, 15/12/2015, 29/03/2016, 26/0/2016 ಹಾಗೂ 26/07/2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ವಾದಿಯು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ, ಕಂದಾಯ ನಿರೀಕ್ಷಕರು, ತೋರಣಗಲ್ಲು ಇವರ ಎಂ ನಂ 02/2000-01 ದಿನಾಂಕ 24/05/2001 ರ ಆದೇಶವನ್ನು ರದ್ದುಪಡಿಸಿ, ವಿಸ್ತೀರ್ಣ 4.00 ಎಕರೆ ಜಮೀನನ್ನು ವಾದಿಯ ಹೆಸರಿಗೆ ನಮೂದಿಸಲು ಕೋರಿರುತ್ತಾರೆ.

ವಾದಿ ಹಾಗೂ ಪ್ರತಿವಾದಿ 1 ರವರು ಈ ನ್ಯಾಯಾಲಯಕ್ಕೆ ದಿನಾಂಕ 26/07/2016 ರಂದು ಹಾಜರಾಗಿ, ರಾಜಿ ಅರ್ಜಿಯನ್ನು ಸಲ್ಲಿಸುತ್ತಾ, ಪ್ರತಿವಾದಿಯನ್ನು ವಿಚಾರಣೆ ಮಾಡಲಾಗಿ, ತನಗೆ ಸ. ನಂ. 49 ರಲ್ಲಿ ವಿಸ್ತೀರ್ಣ 9.00 ಎಕರೆ ಇದ್ದು, ಈ ಪೈಕಿ 4.00 ಎಕರೆಯನ್ನು ವಾದಿಗೆ ಕೊಡಲು ತನ್ನದೇನೂ ಅಭ್ಯಂತರ ಇಲ್ಲವೆಂದು ಹೇಳಿಕೆ ನೀಡಿದ್ದನ್ನು ಪರಿಗಣಿಸಿ, ರಾಜಿ ಅರ್ಜಿಯನ್ನು ಮಾನ್ಯ ಮಾಡಲಾಯಿತು. ಹಾಗೂ ಸ. ನಂ. 49 ರಲ್ಲಿ 9.00 ಎಕರೆ ಜಮೀನನ್ನು ಹೊಂದಿರುವ ಪ್ರತಿವಾದಿ ಸರೋಜಮ್ಮ ಇವರಿಂದ **4.00** ಎಕರೆ ಜಮೀನನ್ನು ವಾದಿಯಾದ ಕೆ. ತಿಪ್ಪಣ್ಣ ತಂದೆ ವೆಂಕಟಪ್ಪ ಇವರ ಹೆಸರಿಗೆ ನೊಂದಾಯಿಸಲು ಅಗತ್ಯ ಕ್ರಮವಹಿಸಲು ತಹಶೀಲ್ದಾರರು, ಸಂಡೂರು ಇವರಿಗೆ ಆದೇಶಿಸುವ ಈ ಕೆಳಕಂಡ ಆದೇಶ.

........2

:: ಆದೇಶ ::

<u>ವಾದಿಯ ಮೇಲ್ಮನವಿಯನ್ನು ಪುರಸ್ಕರಿಸಿದೆ</u>

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ ಸಂಡೂರು ತಾಲ್ಲೂಕಿನ ತಿಮ್ಮಲಾಪುರ ಗ್ರಾಮದ ಸ. ನಂ. 49 ಪೈಕಿ ವಿಸ್ತೀರ್ಣ 9.00 ಗೆ ಸಂಬಂಧಿಸಿದಂತೆ ಉಭಯರೂ ಸಲ್ಲಿಸಿದ ರಾಜಿ ಪತ್ರದಂತೆ, ಈ ಕೆಳಕಂಡಂತೆ ಪಹಣಿಯಲ್ಲಿ ನಮೂದಿಸಲು ತಹಶೀಲ್ದಾರರು, ಸಂಡೂರು ಇವರಿಗೆ ಆದೇಶಿಸಿದೆ.

| ಕ್ರ. ಸಂ | ಹೆಸರು | ಸ. ನಂ | ನಮೂದಿಸ ಬೇಕಾದ ವಿಸ್ತೀರ್ಣ |
|---|---|---|---|
| 01. | ಕೆ. ತಿಪ್ಪಣ್ಣ ತಂದೆ ವೆಂಕಟಪ್ಪ | 49 ಪೈಕಿ | 4.00 ಎಕರೆ (ಸರೋಜಮ್ಮ ಇವರ ಹೆಸರಿಗೆ ನಮೂದು ಇರುವ 9.00 ಎಕರೆಯಲ್ಲಿ ಕಡಿಮೆ ಮಾಡಿ ನಮೂದಿಸುವುದು |
| 02 | ಶ್ರೀಮತಿ ಸರೋಜಮ್ಮ ಗಂಡ ತಿಮ್ಮಪ್ಪ | 49 ಪೈಕಿ | 5.00 ಎಕರೆ |

ಈ ಆದೇಶವನ್ನು ದಿನಾಂಕ **26/07/2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

ಗೆ,
ತಹಶೀಲ್ದಾರರು, ಸಂಡೂರು
ವಾದಿ ಮತ್ತು ಪ್ರತಿ ವಾದಿಗಳಿಗೆ.